# ಚಿಕ್ಕಮಗಳೂರು ಧರ್ಮಕ್ಷೇತ್ರದ ಸುವರ್ಣ ಮಹೋತ್ಸವ ಹಾಗೂ ವಿಶ್ವಾಸ ವರ್ಷದ ಸಮಾರೋಪ ಸಮಾರಂಭ

ದಿನಾಂಕ 26ನೇ ನವೆಂಬರ್ 1963ರಂದು ಅಂದಿನ ಜಗದ್ಗುರುಗಳಾದ 6ನೇ ಪೌಲರು "ಇಂದಿಚೆ ರೇಜಿಯೊನಿಸ್" ಎಂಬ ತಮ್ಮ ಪರಿಪಾಲನ ಪತ್ರದ ಮೂಲಕ ಮೈಸೂರು ಧರ್ಮಕ್ಷೇತ್ರದಿಂದ ಚಿಕ್ಕಮಗಳೂರು, ಹಾಸನ ಹಾಗೂ ಶಿವಮೊಗ್ಗ ಜಿಲ್ಲೆಗಳನ್ನು ಬೇರ್ಪಡಿಸಿ ಹೊಸದಾಗಿ ಚಿಕ್ಕಮಗಳೂರು ಧರ್ಮಕ್ಷೇತ್ರವನ್ನು ರಚಿಸಿದರು. ಈ ಧರ್ಮಕ್ಷೇತ್ರವು ರೂಪುಗೊಂಡ ಸಂಧರ್ಭದಲ್ಲಿ, ಧರ್ಮಕ್ಷೇತ್ರವನ್ನು ಮುನ್ನಡೆಸುವ ಜವಾಬ್ದಾರಿಯನ್ನು ಅತೀ ವಂ. ಡಾ॥ ಅಲ್ಫೋನ್ಸ್ ಮಥಾಯಸ್‌ರವರು (05–02–1964 ರಿಂದ 03–12–1986) ಪಡೆದರು. ಅವರ ವರ್ಗಾವಣೆಯಿಂದ ಖಾಲಿಯಾದ ಸ್ಥಾನವನ್ನು ಅತೀ ವಂ. ಡಾ॥ ಜೆ. ಬಿ. ಸಿಕ್ವೇರಾರವರು (11–06–1987 ರಿಂದ 02–12–2006) ವಹಿಸಿಕೊಂಡರು. ಅವರ ನಿವೃತ್ತಿಯ ನಂತರ ಪ್ರಸ್ತುತ ಅತೀ ವಂ. ಡಾ॥ ಟಿ. ಅಂತೋಣಿ ಸ್ವಾಮಿಯವರು (06–02–2007 ರಿಂದ) ಈ ಧರ್ಮಕ್ಷೇತ್ರವನ್ನು ಮುನ್ನಡೆಸುವ ಜವಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸುತ್ತಿದ್ದಾರೆ. ಧರ್ಮಕ್ಷೇತ್ರ ಸ್ಥಾಪನೆಯಾದ ಸಂಧರ್ಭದಲ್ಲಿ ಕೇವಲ 19 ಧರ್ಮಕೇಂದ್ರಗಳು ಹಾಗೂ 19 ಧರ್ಮಗುರುಗಳನ್ನು ಹೊಂದಿದ್ದು, ಪ್ರಸ್ತುತ ಇದು ಹೆಮ್ಮರವಾಗಿ ಬೆಳೆದು 41 ಧರ್ಮಕೇಂದ್ರಗಳು ಹಾಗೂ 56 ಧರ್ಮಗುರುಗಳನ್ನು ಹೊಂದಿದೆ. ಇದರ ಜೊತೆಯಲ್ಲಿ 24 ಧಾರ್ಮಿಕ ಗುರುಗಳು ಹಾಗೂ 250ಕ್ಕೂ ಹೆಚ್ಚು ಧರ್ಮಭಗಿನಿಯರು ಈ ಧರ್ಮಕ್ಷೇತ್ರದ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಅಮೂಲ್ಯ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ನಮ್ಮ ಧರ್ಮಕ್ಷೇತ್ರದ ಭಾಗ್ಯವೆಂಬಂತೆ ದಿನಾಂಕ 07–10–2012ರಿಂದ 24–11–2013ರ ವರ್ಷವನ್ನು ಅಂದಿನ ಜಗದ್ಗುರು 16ನೇ ಬೆನೆಡಿಕ್ಟ್‌ರವರು ದ್ವಿತೀಯ ವ್ಯಾಟಿಕನ್ ಮಹಾ ಸಮ್ಮೇಳನದ ಸುವರ್ಣ ಮಹೋತ್ಸವವನ್ನು ಕೊಂಡಾಡುವ ಸಮಯದಲ್ಲಿ ಈ ವರ್ಷವನ್ನು ವಿಶ್ವಾಸದ ವರ್ಷವೆಂದು ಘೋಷಿಸಿದರು. ಕಾಕತಾಳಿಯವೆಂಬಂತೆ ಚಿಕ್ಕಮಗಳೂರು ಧರ್ಮಕ್ಷೇತ್ರದ ಸುವರ್ಣೋತ್ಸವದ ಸಂಧರ್ಭವನ್ನು ಕೂಡ ವಿಶ್ವಾಸದ ವರ್ಷದೊಂದಿಗೆ ಅತ್ಯಂತ ಅರ್ಥಭರಿತವಾಗಿ ಆಚರಿಸುವ ಸಮಯವು ಒದಗಿಬಂದಿದೆ. ಈ ಸಮಯದಲ್ಲಿ ಈ ಸುವರ್ಣೋತ್ಸವದ ಮುಕ್ತಾಯ ಸಮಾರಂಭವನ್ನು ಇದೇ ತಿಂಗಳ 24–11–2013ರ ಭಾನುವಾರ ಸಂಜೆ 3.00 ಘಂಟೆಯಿಂದ ಚಿಕ್ಕಮಗಳೂರಿನ ಸಂತ ಜೋಸೇಫರ ಪ್ರಧಾನಾಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ವಿಶ್ವಾಸದ ವರ್ಷ ಹಾಗೂ ಧರ್ಮಕ್ಷೇತ್ರದ ಸುವರ್ಣೋತ್ಸವದ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ: 11–10–2012ರಂದು ಹಾಸನದ ಸಂತ ಅಂತೋಣಿಯವರ ದೇವಾಲಯದಲ್ಲಿ ಅತೀ ವಿಜೃಂಭಣೆಯಿಂದ ನೆರವೇರಿಸಲಾಗಿತ್ತು.

ಈ ಸುವರ್ಣ ಸಂವತ್ಸರದ ಅಂಗವಾಗಿ ಜನರಲ್ಲಿ ಕ್ರಿಸ್ತನ ಬಗ್ಗೆ ಜ್ಞಾನ ಮತ್ತು ವಿಶ್ವಾಸವನ್ನು ಮೂಡಿಸುವ ಸಲುವಾಗಿ ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲಾ ಕೇಂದ್ರಗಳಲ್ಲಿ "ಕ್ರಿಸ್ತ ಕಥನ" ಎಂಬ ಧ್ವನಿ ಬೆಳಕು ಕಾರ್ಯಕ್ರಮವನ್ನು ಪ್ರದರ್ಶಿಸಲಾಯಿತು. ಈ ಎರಡೂ ಜಿಲ್ಲೆಯ ಸುಮಾರು 25,000 ಕ್ರೈಸ್ತ ಮತ್ತು ಕ್ರೈಸ್ತೇತ ಬಂಧುಗಳು ಜನರು ಇದಕ್ಕೆ ಸಾಕ್ಷಿಯಾದರು. ಈ ಕಾರ್ಯಕ್ರಮದ ಜೊತೆಯಲ್ಲಿ ಪ್ರತಿ ತಿಂಗಳನ್ನು ಈ ಕೆಳಗಿನ ಉದ್ದೇಶಗಳಿಗಾಗಿ ಸಮರ್ಪಿಸಿ ಆಚರಿಸಲಾಯಿತು.

| | | | |
|---|---|---|---|
| ನವೆಂಬರ್ 2012 | ಮಕ್ಕಳಿಗಾಗಿ | ಡಿಸೆಂಬರ್ 2012 | ಕುಟುಂಬಗಳಿಗಾಗಿ |
| ಜನವರಿ 2013 | ಹಿರಿಯರಿಗಾಗಿ | ಫೆಬ್ರವರಿ 2013 | ವ್ಯಾಧಿಷ್ಠರಿಗಾಗಿ |
| ಮಾರ್ಚ್ 2013 | ಮಹಿಳೆಯರಿಗಾಗಿ | ಏಪ್ರಿಲ್ 2013 | ವಿಕಲ ಚೇತನರಿಗಾಗಿ |
| ಮೇ 2013 | ಕಾರ್ಮಿಕರಿಗಾಗಿ | ಜೂನ್ 2013 | ಶ್ರೀ ಸಾಮಾನ್ಯರಿಗಾಗಿ |
| ಜುಲೈ 2013 | ರೈತಾಪಿ ವರ್ಗದವರಿಗಾಗಿ | ಆಗಸ್ಟ್ 2013 | ಯುವಜನರಿಗಾಗಿ |
| ಸೆಪ್ಟೆಂಬರ್ 2013 | ಶಿಕ್ಷಕ/ಶಿಕ್ಷಕಿಯರಿಗಾಗಿ | ಅಕ್ಟೋಬರ್ 2013 | ದೈವ ವಾಕ್ಯದ ಉದ್ಧೇಶಕ್ಕಾಗಿ |

ಕಳೆದ 50 ವರ್ಷಗಳಲ್ಲಿ ಧರ್ಮಕ್ಷೇತ್ರವು ಕೇವಲ ಧಾರ್ಮಿಕವಾಗಿ ಮಾತ್ರವಲ್ಲದೆ ಸಾಮಾಜಿಕ ಹಾಗೂ ಶೈಕ್ಷಣಿಕವಾಗಿಯೂ ವಿವಿಧ ಕ್ಷೇತ್ರಗಳಲ್ಲಿ ವಿವಿಧ ಸೇವಾಕಾರ್ಯಗಳ ಮೂಲಕ ತನ್ನ ಅತ್ಯಮೂಲ್ಯ ಸೇವೆಯನ್ನು ಸಮಾಜದ ಎಲ್ಲಾ ವರ್ಗದ ಜನರಿಗೆ ನೀಡುತ್ತಿದೆ.

**ಧಾರ್ಮಿಕವಾಗಿ:** ಪ್ರಸಕ್ತ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳನ್ನೊಳಗೊಂಡ 41 ಧರ್ಮಕೇಂದ್ರಗಳಲ್ಲಿರುವ 39,558 ಕಥೋಲಿಕರಿಗೆ ಎಲ್ಲಾ ರೀತಿಯ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಈ ಧರ್ಮಕ್ಷೇತ್ರವು ಒದಗಿಸುತ್ತಾ ಬಂದಿದೆ.

**ಸಾಮಾಜಿಕವಾಗಿ:** ಚಿಕ್ಕಮಗಳೂರು ವಿವಿದೋದ್ಧೇಶ ಸಮಾಜ ಸೇವಾ ಸಂಸ್ಥೆಯ ಮೂಲಕ ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಯ 13 ತಾಲ್ಲೂಕುಗಳ 560 ಹಳ್ಳಿಗಳಲ್ಲಿ ಸೇವಾ ಕಾರ್ಯದ ಮೂಲಕ ಬಡವರ, ಶೋಷಿತರ, ನೊಂದವರ ಅಭಿವೃದ್ಧಿಗೆ ಹಾಗೂ ಅವರ ಏಳಿಗೆಗಾಗಿ ಅನೇಕ ಯೋಜನೆಗಳ ಮೂಲಕ ಶ್ರಮಿಸುತ್ತಿದೆ. ಇವುಗಳಲ್ಲಿ ಮುಖ್ಯವಾಗಿ ಮಹಿಳಾ ಸಶಕ್ತತೆ ಕಾರ್ಯಕ್ರಮದಡಿ ರೂಪುಗೊಂಡಿರುವ ಸುಮಾರು 1200 ಸ್ವಸಹಾಯ ಸಂಘಗಳಲ್ಲಿ ಸುಮಾರು 20875 ಸದಸ್ಯರಿದ್ದು, ಇವುಗಳ ಜೊತೆಯಲ್ಲಿ ಪರಿಸರ ಸ್ನೇಹಿ ಮನೆಗಳ ನಿರ್ಮಾಣ, ಜಲಾನಯನ ಯೋಜನೆ, ಅಂಗವಿಕಲರನ್ನು ಹಾಗೂ ಹೆಚ್.ಐ.ವಿ. ಸೋಂಕಿತರನ್ನು ಸಮಾಜದ ಮುಖ್ಯವಾಹಿನಿಗೆ ತರುವುದು, ಕುಟುಂಬ ಸಂರಕ್ಷಣಾ ಯೋಜನೆಗಳ ಮುಖಾಂತರ ಸಮಾಜದ ಏಳಿಗೆಗಾಗಿ ಶ್ರಮಿಸುತ್ತಿದೆ.

**ಶೈಕ್ಷಣಿಕವಾಗಿ:** 3 ಪದವಿ ಕಾಲೇಜುಗಳು, 7 ಪದವಿ ಪೂರ್ವ ಕಾಲೇಜುಗಳು, 1 ತಾಂತ್ರಿಕ ತರಬೇತಿ ಕೇಂದ್ರ, 21 ಪ್ರೌಢಶಾಲೆ ಹಾಗೂ 34 ಕಿರಿಯ ಪ್ರಾಥಮಿಕ ಶಾಲೆಗಳ ಮುಖಾಂತರ ಈ ಎರಡು ಜಿಲ್ಲೆಯ ಜನಸಾಮನ್ಯರ ವೈಯಕ್ತಿಕ, ಜ್ಞಾನಭಿವೃಧ್ಧಿ ಹಾಗೂ ಆರ್ಥಿಕಾಭಿವೃದ್ಧಿಗಾಗಿ ನಿಸ್ವಾರ್ಥವಾಗಿ ಶ್ರಮಿಸುತ್ತಾ ಬಂದಿದೆ.

**ಆರೋಗ್ಯಕ್ಷೇತ್ರದಲ್ಲಿ:** ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ವಿವಿಧ ಸ್ಥಳಗಳಲ್ಲಿ ಹಲವಾರು ಆರೋಗ್ಯ ಕೇಂದ್ರ ಹಾಗೂ ಆಸ್ಪತ್ರೆಗಳ ಮೂಲಕ ಬಡರೋಗಿಗಳಿಗೆ ಆರೋಗ್ಯ ಸೇವೆಯನ್ನು ನೀಡಲಾಗುತ್ತಿದೆ.

**ಮುಂದಿನ ಯೋಜನೆಗಳು:** ಈ ಸುವರ್ಣ ಸಂವತ್ಸರದ ಸವಿನೆನಪಿಗಾಗಿ ಧರ್ಮಕ್ಷೇತ್ರವು ಹಲವಾರು ಯೋಜನೆಗಳನ್ನು ರೂಪಿಸಿಕೊಂಡಿದೆ. ಇದರಲ್ಲಿ ಮುಖ್ಯವಾಗಿ :–

1. ಚಿಕ್ಕಮಗಳೂರು ಧರ್ಮಕ್ಷೇತ್ರದ ಬಡಮಕ್ಕಳ ಶೈಕ್ಷಣಿಕ ನಿಧಿಯ ಸ್ಥಾಪನೆ.
2. ಚಿಕ್ಕಮಗಳೂರು ಧರ್ಮಕ್ಷೇತ್ರದ ಪಾಲನಾ ಕೇಂದ್ರದ ನಿರ್ಮಾಣ
3. ನಿತ್ಯಾರಾಧನೆ ಮಂದಿರದ ನಿರ್ಮಾಣ

*******